ಹೇಮಾವತಿ ನಾಲಾ ಯೋಜನೆಯ ಕೆಲಸ ಸ್ಥಗಿತ.

223 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಮಕೂರು ಜಿಲ್ಲೆಯಲ್ಲಿ ಹೇಮಾವತಿ ನಾಲಾ ಯೋಜನೆ ಕಾಮಗಾರಿ ಸ್ಥಗಿತವಾಗಿರುವುದಕ್ಕೆ ಕಾರಣವೇನು;*

ಆ) *ಈ ಬಗ್ಗೆ ತುಮಕೂರು ಜಿಲ್ಲೆಗೆ ಹೇಮಾವತಿ ನೀರನ್ನು ಯಾವಾಗ ಬಿಡುಗಡೆ ಮಾಡಲಾಗುವುದು;*

ಇ) *ತುಮಕೂರು ಜಿಲ್ಲೆಯಲ್ಲಿ ಹೇಮಾವತಿ ನಾಲಾ ಕಾಮಗಾರಿಯನ್ನು ಇನ್ನು ಎಷ್ಟು ತಿಂಗಳೊಳಗೆ ಪೂರ್ಣಗೊಳಿಸಲಾಗುವುದು?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಟೆಂಡರ್ ಆಧಾರದ ಮೇಲೆ, ನಿಯಮಾನುಸಾರ ಕೈಗೆತ್ತಿಕೊಂಡಿರುವ ತುಂಡು ಗುತ್ತಿಗೆ ಹಾಗೂ ಇಲಾಖಾವತಿ ಆಧಾರದ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ನಿಯಮ ಬಾಹಿರವಾದ ಕಾಮಗಾರಿಗಳನ್ನು ಮಾತ್ರ ಸ್ಥಗಿತಗೊಳಿಸಲಾಗಿದೆ.

ಆ) ತುಮಕೂರು ಜಿಲ್ಲೆಗೆ 94-95ರಿಂದ ಮೊದಲು ಗೊಂಡು 97-98ರ ವರೆಗೆ ಹಂತ ಹಂತವಾಗಿ ನೀರಾವರಿ ಸಾಮರ್ಥ್ಯವನ್ನು ಕಲ್ಪಿಸುವ ಕಾರ್ಯಕ್ರಮವಿದೆ.

ತುಮಕೂರು ಜಿಲ್ಲೆಯ ಏತ ನೀರಾವರಿ ಯೋಜನೆ

224 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. *ತುಮಕೂರು ಜಿಲ್ಲೆಯ ನಾಲಾ ಪ್ರದೇಶದ ಕೆರೆಗಳಿಗೆ ಹೇಮಾವತಿ ನೀರನ್ನು ಏತನೀರಾವರಿ ಮೂಲಕ ಒದಗಿಸಲು ಸರ್ಕಾರ ಯೋಚಿಸಿದೆಯೇ;*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಗೋವಾ ಸ್ವಾತಂತ್ಯ ಹೋರಾಟಗಾರರಿಗೆ ನೀಡುತ್ತಿರುವ ಗೌರವ ಧನ

226 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗ ದಯವಿಟ್ಟು ಉತ್ತರಿಸುವರೆ?

ಅ) *1955ರ ಗೋವಾ ಸ್ವಾತಂತ್ಯ ಚಳುವಳಿಯಲ್ಲಿ ಕರ್ನಾಟಕದಿಂದ ಭಾಗವಹಿಸಿದ ಎಷ್ಟು ಮಂದಿ ಗೋವಾ ಸ್ವಾತಂತ್ಯ ಹೋರಾಟಗಾರರಿಗೆ ರಾಜ್ಯ ಸರ್ಕಾರವು ಗೌರವಧನ ನೀಡುತ್ತಿದೆ, ಜಿಲ್ಲಾವಾರು ಸಂಖ್ಯೆ ನೀಡುವುದು;*

ಆ) ದಕ್ಷಿಣ ಕನ್ನಡ ಜಿಲ್ಲೆಯ ಎಷ್ಟು ಮಂದಿ ಗೌರವಧನಕ್ಕೆ ಅರ್ಜಿ ಸಲ್ಲಿಸಿದ್ದಾರೆ;

ಇ) ದಕ್ಷಿಣ ಕನ್ನಡ ಜಿಲ್ಲೆಯ ಎಷ್ಟು ಮಂದಿ ಗೌರವಧನ ಪಡೆಯುತ್ತಿದ್ದಾರೆ, ವಿವರ ನೀಡುವುದು;

ಈ) ದಕ್ಷಿಣ ಕನ್ನಡ ಗೋವಾ ಸ್ವಾತಂತ್ರ್ಯ ಹೋರಾಟಗಾರರು ಸಲ್ಲಿಸಿದ ಅರ್ಜಿಗಳನ್ನು ಕೊನೆಯ ಗಳಿಗೆಯಲ್ಲಿ ಗೌರವಧನವನ್ನು ಕೈ ಬಿಡಲು ಕಾರಣವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) 1258. ಜಿಲ್ಲಾವಾರು ಮಾಹಿತಿ ಈ ಕೆಳಕಂಡಂತಿದೆ:

	ಜಿಲ್ಲೆ ಹೆಸರು	ಸಂಖ್ಯೆ		ಜಿಲ್ಲೆ ಹೆಸರು	ಸಂಖ್ಯೆ
1.	ಬಳ್ಳಾರಿ	-	12.	ಬೆಳಗಾಂ	52
2.	ಚಿತ್ರದುರ್ಗ	21	13.	ಕಾರವಾರ	23
3.	ತುಮಕೂರು	55	14.	ಧಾರವಾಡ	14
4.	ಕೋಲಾರ	01	15.	ಬಿಜಾಪುರ	514
5.	ಮೈಸೂರು	25	16.	ಗುಲ್ಬರ್ಗಾ	70
6.	ಶಿವಮೊಗ್ಗ	118	17.	ರಾಯಚೂರು	04
7.	ದಕ್ಷಿಣ ಕನ್ನಡ	04	18.	ಬೀದರ್	26
8.	ಮಂಡ್ಯ	03	19.	ಹುಬ್ಬಳ್ಳಿ	170
9.	ಹಾಸನ	04	20.	ಬೆಂಗಳೂರು(ಗ್ರಾ)	09
10.	ಚಿಕ್ಕಮಗಳೂರು	03	21.	ಬೆಂಗಳೂರು(ನ)	-
11.	ಕೊಡಗು	-	22.	ಬೆಂಗಳೂರು	
				ಪಿಂಚಣಿ ಬಟವಾಡೆ ಖಜಾನೆ	142

ಆ) 36.

ಇ) 04 ಮಂದಿ ಗೌರವಧನ ಪಡೆಯುತ್ತಿದ್ದಾರೆ.

1. ಶ್ರೀ ಎಸ್. ಎಂ. ಗುರಪ್ಪ, ತಂದೆ : ನಾಗಪ್ಪ, ಉಡುಪಿ ತಾ.
2. ಶ್ರೀ ಮಠಾರ ವಿಠಲ ಕಿಣೆ, ಉಡುಪಿ ತಾ.
3. ಶ್ರೀ ಟಿ. ಪದ್ಮನಾಭ ರಾವ್, ಉಡುಪಿ ತಾ.
4. ಶ್ರೀಮತಿ ಸೀತಮ್ಮ ಕೋಂ : ಪರಮೇಶ್ವರನ್ ಸುಳ್ಯ

ಈ) ಈ ಯೋಜನೆಯು ಸಮರ್ಪಕವಾಗಿ ನಡೆಯದ ಕಾರಣ ಸರ್ಕಾರವು ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದ ಹೋರಾಟಗಾರರಿಗೆ ಗೌರವಧನ ಮಂಜೂರು ಮಾಡುವುದನ್ನು ದಿನಾಂಕ 5.4.1993ರಿಂದ ನಿಲ್ಲಿಸಿದೆ.

ದಕ್ಷಿಣ ಕನ್ನಡ ಜಿಲ್ಲಾ ಪೋಲೀಸ್ ಮೀಸಲು ಪಡೆಯ ಸಂಖ್ಯೆಯನ್ನು ಹೆಚ್ಚಿಸಲು ಒತ್ತಾಯ

227 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೋಲೀಸ್ ಇಲಾಖೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮೀಸಲು ಪಡೆಯ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಆ) ಕಾನೂನು ಬದ್ಧವಾಗಿ ಪೋಲೀಸ್ ಅಧಿಕಾರಿಗಳಿಗೆ ಹಾಗೂ ಇನ್ನಿತರ ಅಧಿಕಾರಿಗಳಿಗೆ ಎಷ್ಟು ಜನ ಆರ್ಡರ್‌ಲ್‌ಗಳನ್ನು ಮನೆಯಲ್ಲಿ ಇಡಲು ಅಧಿಕಾರ ಇದೆ.

ಇ) ಈ ನಿಯಮದ ಪ್ರಕಾರ ಪ್ರಸ್ತುತ ಎಷ್ಟು ಜನ ಅಧಿಕಾರಿಗಳು ಈ ನಿಯಮವನ್ನು ಪಾಲಿಸುತ್ತಿದ್ದಾರೆ, ಪಾಲಿಸದಿದ್ದಲ್ಲಿ ಅದನ್ನು ಸರಿಪಡಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ಈ ಬಗ್ಗೆ ಗುಪ್ತ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆಯೇ;

ಈ) ಬೇರೆ ರಾಜ್ಯಗಳ ಒಂದಂಕಿ ಲಾಟರಿಯನ್ನು ರದ್ದು ಗೊಳಿಸುವ ವಿಚಾರ ಸರ್ಕಾರಕ್ಕಿದೆಯೇ, ಹಾಗಿದ್ದಲ್ಲಿ ಯಾವ ಸಮಯದೊಳಗೆ ರದ್ದು ಗೊಳಿಸುತ್ತದೆ. ರದ್ದುಗೊಳಿಸದಿದ್ದಲ್ಲಿ ಮಾರಾಟ ಮಾಡಲು ನಿಬಂಧನೆಗಳೇನಾದರೂ ಹಾಕುತ್ತೀರಾ.

ಉ) ಕ್ಯಾಬರೇ, ಜುಗಾರಿ ಕಟ್ಟಾ ರೌಡಿಗಳನ್ನು ನಿಯಂತ್ರಿಸಲಾಗುವುದೆಂದು ಹೇಳಿಕೆ ನೀಡಲಾಗಿದೆ ಇಷ್ಟರತನಕ ತೆಗೆದುಕೊಂಡ ಕ್ರಮಗಳೇನು, ಇದು ತಾತ್ಕಾಲಿಕವೂ ಅಥವಾ ಸತತವಾಗಿ ತೆಗೆದುಕೊಳ್ಳಲಾಗುವುದೊ.

ಊ) ಮಂಗಳೂರಿನಲ್ಲಿರುವ ಸಬ್ ಜೈಲು ಹಾಗೂ ಸಿಬ್ಬಂದಿಗಳ ಗೃಹಗಳು ಕಳೆದ 15 ವರ್ಷಗಳಿಂದ ಯಾವುದೇ ದುರಸ್ತಿ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಒಳಚರಂಡಿ ಅವ್ಯವಸ್ಥೆ, ಕುಡಿಯುವ ನೀರಿನ ಸಮಸ್ಯೆ, ಅಡುಗೆ ಕೋಣೆಯನ್ನು ನವೀಕರಿಸುವ ವ್ಯವಸ್ಥೆ, ಮಾಡಿನ ದುರಸ್ತಿ, ಗೋಡೆಗಳಿಗೆ ಸುಣ್ಣ ಬಳಿಯುವುದು ಇತ್ಯಾದಿಗಳನ್ನು ಮಾಡಲು ತಕ್ಷಣ ಕ್ರಮ ಕೈಗೊಳ್ಳುವುದೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) 1994-95ನೇ ಸಾಲಿಗಾಗಿ 12 ಪ್ಲಟೂನ್‌ಗಳ ಸಶಸ್ತ್ರ ಸಿಬ್ಬಂದಿಯನ್ನು ಮಂಜೂರು ಮಾಡಲು ಹಾಗೂ ಅದರಲ್ಲಿ ಒಂದು ಪ್ಲಟೂನ್ ಸಿಬ್ಬಂದಿಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕೊಡಲು ಉದ್ದೇಶಿಸಲಾಗಿದೆ.